# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗು ವಿಶೇಷ ನ್ಯಾಯಾಲಯ ,
## ಚಾಮರಾಜನಗರ.

## ಸ್ಪೆಷಲ್ ಕೇಸ್ – 40/2020

**ಚಾಸಾ– 01**

**ಫ್ರಾಸಾ– 01**

**ದಿನಾಂಕ 30.03.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿದಾರರ ಹೆಸರು** | : ಪುಟ್ಟಮಾದಯ್ಯ |
| **ತಂದೆಯ ಹೆಸರು** | : ಲೇಟ್ ಮಾದಯ್ಯ |
| **ವಯಸ್ಸು** | : 59 ವರುಷ |
| **ವೃತ್ತಿ** | : ಎಸ್ ಪಿ ಲೋಕಾಯುಕ್ತ, ರಾಮನಗರ |
| **ವಾಸ ಸ್ಥಳ** | : ರಾಮನಗರ |
| **ಮೊಬೈಲ್ ನಂ.** | : 9448310736 |

**ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ :–**

ನಾನು ಕೊಳ್ಳೇಗಾಲಪೋಲಿಸ್ ಉಪ ವಿಭಾಗದ ಡಿವೈ ಎಸ್ ಪಿ ಯಾಗಿ 2017 ಜುಲೈ ರಿಂದ 2019 ಅಗಸ್ಟ್ ವರೆಗೆ ಕೆಲಸ ಮಾಡಿದ್ದೇನೆ. ಕೊಳ್ಳೇಗಾಲ ಗ್ರಾಮಾಂತರ ಪೋಲಿಸ ಠಾಣೆ ನನ್ನ ಸರಹದ್ದಿಗೆ ಬರುತ್ತಿದೆ. ದಿಃ08.12.2017 ರಂದು ಮಧ್ಯಾಹ್ನ 01.00 ಗಂಟೆಗೆ ನಾನು ಕಛೇರಿಯಲ್ಲಿರುವಾಗ ಬಾತ್ಮಿದಾರರಿಂದ ಬಂದ ಮಾಹಿತಿ ಏನೆಂದರೆ ಗ್ರಾಮಾಂತರ ಪೋಲಿಸ್ ಠಾಣೆಯ ಸತ್ತೆಗಾಲ – ಜಾಗೇರಿಯ ನಡುವೆ ತಿಲ್ಲೆಗೌಡನ ದೊಡ್ಡಿಯ ಹತ್ತಿರ ಗುರಸ್ವಾಮಿ ಎಂಬುವವರ ತಮ್ಮ ಜಮೀನಿನಲ್ಲಿ ಅರಿಷಿಣ ಹಾಗೂ ತೋಗರಿ ಬೆಳೆಯ ನಡುವೆ ಗಾಂಜಾ ಗಿಡಗಳನ್ನು ಬೆಳೆದಿರುವ ಬಗ್ಗೆ ಮಾಹಿತಿ ಕೊಟ್ಟಿರುತ್ತಾರೆ.

ಸ್ಪೇಷಲ್ ಕೇಸ್ - 40/2020
ಚಾಸಾ-01, ಪ್ರಾಸಾ-01

ತಕ್ಷಣ ನಾನು ಕೊಳ್ಳೇಗಾಲ ಗ್ರಾಮಾಂತರ ಪೋಲಿಸ್ ಠಾಣೆಯ ಪಿಎಸ್ಐ ವಿ ಸಿ ವನರಾಜು, ಹಾಗೂ ಸಿಬ್ಬಂದಿಗಳು ಹಾಗೂ ನನ್ನ ಕಛೇರಿಯ ಸಿಬ್ಬಂದಿಗಳಾದ ಎಎಸ್ಐ ಚೆಲುವರಾಜು ಹಾಗೂ ಎಲ್ ಪಿ ಸಿ ಕೇಸ್ಗೆ ಸಂಧಪಟ್ಟ ಪತ್ತೆ ದಳದ ಸಿಬ್ಬಂದಿಗಳನ್ನು ಕಛೇರಿಗೆ ಬರಮಾಡಿಕೊಂಡು ನನಗೆ ಬಂದ ಮಾಹಿತಿ ತಿಳಿಸಿದೇನು. ಮತ್ತು ದಾಳಿ ಮಾಡಬೇಕು ಎಂದು ಕೂಡ ತಿಳಿಸಿದೆನು. ನಂತರ ನಾವುಗಳೆಲ್ಲಾ ಇಲಾಖಾ ಜೀಪ್ ಕೆ ಎ 10 ಜಿ 448 ಮತ್ತು ಕೆ ಎ 10 ಜಿ 329 ಎರಡು ಜೀಪ್ಗಳಲ್ಲಿ ಮಧ್ಯಾಹ್ನ ಸುಮಾರು 1.30 ಗಂಟೆಗೆ ಕಛೇರಿಯಿಂದ ಹೊರಟು ಸತ್ತೆಗಾಲ ಹ್ಯಾಂಡಪೋಸ್ಟ್ ಮಾರ್ಗವಾಗಿ ಸತ್ತೇಗಾಲ - ಜಾಗೇರಿಯ ಹಳೆ ಕೋಟೆಯಲ್ಲಿ ಮುನೇಶ್ವರ ದೇವಸ್ಥಾನದ ಬಳಿ ಹೋಗಿ ಅಲ್ಲಿ ಇದ್ದ ರಾಶಿ ಬೋಳಿ ತಾಂಡಾ ಗ್ರಾಮದ ಸುಬ್ರಮಣಿ ಮತ್ತು ಪನ್ನಾಡಿ ನಾಯಕ ಎಂಬುವವರನ್ನು ಕರೆದು ನನಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಪಂಚರಾಗಬೇಕು ಎಂದು ಕೇಳಿದ ಮೇರೆಗೆ ಒಪ್ಪಿಕೊಂಡರು. ಅಲ್ಲಿ ಅವರಿಗೆ ನೋಟೀಸು ಕೂಡ ಜಾರಿ ಮಾಡಿದೆ. ಆ ನೋಟಿಸ್ ಈಗ ನೋಡುತ್ತಿದ್ದು ಅದನ್ನು ಈಗ ನಿ.ಪಿ 1 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ 1 (ಎ) ಎಂದು ಗುರುತಿಸಲಾಯಿತು.

ಸದರಿಯವರನ್ನು ಸಹ ಇಲಾಖಾ ವಾಹನದಲ್ಲಿ ಕರೆದುಕೊಂಡು ಮಧ್ಯಾಹ್ನ 02.15 ಗಂಟೆಗೆ ಬಾತ್ಮಿದಾರರು ತಿಳಿಸಿದಂತ ಸ್ಥಳದ ಹತ್ತಿರ ಹೋಗಿ ಜೀಪ್ ನ್ನು ಮರೆಯಾಗಿ ನಿಲ್ಲಿಸಿ ಪಂಚರು ಹಾಗೂ ಪೋಲಿಸ್ ಸಿಬ್ಬಂದಿ ಜೊತೆ ಗುರುಸ್ವಾಮಿಯ ವ್ಯವಸಾಯ ಮಾಡುವ ಜಮೀನಿಗೆ ಹೋದೇವು. ಆಗ ಜಮೀನು ಮಧ್ಯದಲ್ಲಿದ್ದ ಒಬ್ಬ ಆಸಾಮಿ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನ ಮಾಡಿದನು. ತಕ್ಷಣ ನಾವು ಆತನನ್ನು ಸುತ್ತುವರೆದು ಹಿಡಿದು ಹೆಸರು ವಿಳಾಸ ಕೇಳಲಾಗಿ ಗುರುಸ್ವಾಮಿ ಬಿನ್ ಲೇಟ್ ಚಿನ್ನಪ್ಪ ಗೌಂಡರ್ ಅಲಿಯಾಸ್ ಚಿನ್ನಪೊನ್ನು, 35 ವರುಷ, ವ್ಯವಸಾಯ, ವನ್ಯಕುಲ ಕ್ಷತ್ರಿಯ ಜನಾಂಗ, ತಿಲ್ಲೆಗೌಡನ ದೊಡ್ಡಿ ಗ್ರಾಮ ಎಂದು ತಿಳಿಸಿದನು. ಈತನನ್ನು ಜಮೀನಿನ ಮಾಲಪಿಕರು ಯಾರು ಎಂದು ಕೇಳಲಾಗಿ ಜಮೀನು ತನ್ನದು ಎಂದು ಹಾಗು ತಾನೇ ವ್ಯವಸಾಯ ಮಾಡುತ್ತಿರುವದಾಗಿ ಹೇಳಿದನು.

ಸ್ಪೇಷಲ್ ಕೇಸ್ – 40/2020
ಚಾಸಾ–01, ಪ್ರಾಸಾ–01

ನಂತರ ಬಾತ್ಮಿದಾರರು ನೀಡಿದ ಮಾಹಿತಿಯ ಬಗ್ಗೆ ಅಂದರೆ ಗಾಂಜಾ ಗಿಡಗಳ ಬಗ್ಗೆ ನೋಟೀಸು ನೀಡಿ ವಿವರ ಕೇಳಲಾಗಿ ಆರೋಪಿ ಜಮೀನಿನಲ್ಲಿ ಅರಿಷಿಣ ಮತ್ತು ತೊಗರಿ ಬೆಳೆ ನಡುವೆ ಗಾಂಜಾ ಬೆಳೆ ಬೆಳದಿರುವುದನ್ನು ತೋರಿಸಿದನು. ನಂತರ ಪಂಚಾತಿಯದಾರರ ಸಮಕ್ಷಮದಲ್ಲಿ ಪರಿಶೀಲಿಸಿ ಆ ಗಾಂಜಾ ಗಿಡಗಳನ್ನು ಬೆಳೆಯಲು ರಹದಾರಿ ಇದೆಯಾ ಎಂದು ಆರೋಪಿಯನ್ನು ಕೇಚಳಿದಾಗ, ಆರೋಪಿ ಯಾವುದು ಇಲ್ಲ 55 ಗಾಂಜಾ ಗಿಡಗಳನ್ನು ಬೆಳೆದಿರುವುದಾಗಿ ಆರೋಪಿ ತಿಳಿಸಿರುತ್ತಾರೆ. ಆರೋಪಿಗೆ ಜಾರಿ ಮಾಡಿದ ನೋಟೀಸ್ ಸಾಕ್ಷಿ ಗುರುತಿಸಿರುತ್ತಾರೆ. ಅದನ್ನು ನಿ.ಪಿ 2 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿ.ಪಿ 2 (ಎ) ಎಂದು ಗುರುತಿಸಲಾಗಿದೆ. ಅದಕ್ಕೆ ಆರೋಪಿ ಕೂಡ ಮಾಡಿರುತ್ತಾರೆ. ಸಾಕ್ಷಿ ಆರೋಪಿ ಸಹಿಯನ್ನು ಕೂಡ ಗುರುತಿಸಿರುತ್ತಾರೆ. ಅದನ್ನು ನಿ.ಪಿ 2 (ಬಿ) ಎಂದು ಗುರುತಿಸಲಾಗಿದೆ. ಆ ನಂತರ ಸಿಬ್ಬಂದಿಗಳ ಮತ್ತು ಪಂಚರ ಸಹಾಯದಿಂದ ಆ ಗಾಂಜಾ ಗಿಡಗಳನ್ನು ಬೇರು ಸಹಿತ ಕೀಳಿಸಿ ಎಂದು ಕಡೆ ರಾಶಿ ಹಾಕಿಸಿ ಎಣಿಕೆ ಮಾಡಿದಾಗ ಅದರಲ್ಲಿ 55 ಗಾಂಜಾ ಗಿಡಗಳು ಇದ್ದು ಅದು 3 ರಿಂದ 5 ಅಡಿ ಎತ್ತರ ಇದ್ದವು. ನಂತರ ರಾಶಿ ಬೋಳಿ ತಾಂಡಾದ ಗ್ರಾಮದ ಮಣಿ ನಾಯಕ ಅವರಿಂದ ರಾತ್ಲು ತೂಕ ಮಾಪಕವನ್ನು ಸ್ಥಳಕ್ಕೆ ತರಿಸಿಕೊಂಡು ತೂಕ ಮಾಡಲಾಗಿ ಅದು ಒಟ್ಟು 106 ಕೆ ಜಿ ತೂಕ ಇತ್ತು. ನಂತರ ಸ್ಯಾಂಪಲ್ ಗಾಗಿ ಗಾಂಜಾ ಗಿಡಗಳಿಂದ ಸೊಪ್ಪು ಹೂ ಗೊಂಡೆ ಬೀಜ ಮಿಶ್ರಿತ ಇರುವ 500 ಗ್ರಾಂ ತೂಕ ಇರುವ ಗಾಂಜಾ ಸೊಪ್ಪನ್ನು ಸಂಗ್ರಹಿಸಿ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಮೊಹರು ಮಾಡಿ ಪಿ ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ನಂತರ ಪಂಚರ ಸಮಕ್ಷಮ ಅಮಾನತ್ತು ಮಹಜರನ್ನು ಮಧ್ಯಾಹ್ನ 02.30 ರಿಂದ 04.00 ಗಂಟೆ ವರೆಗೆ ಮಾಡಿರುತ್ತೇನೆ. ನಂತರ ಆರೊಪಿಯನ್ನು ಮತ್ತು ಮಾಲನ್ನು ವಶಕ್ಕೆ ತೆಗೆದುಕೊಂಡು ಸಂಜೆ 05.00 ಗಂಟೆಗೆ ಗ್ರಾಮಾಂತರ ಪೋಲಿಸ್ ಠಾಣೆಗೆ ವಾಪಸ್ಸು ಬಂದು ಒಂದು ವರದಿ ತಯಾರಿಸಿ ಕೊಳ್ೇಳಗಾಲ ಗ್ರಾಮಾಂತರ ಪೋಲೀಸ್ ಠಾಣೆಯ ಠಾಣಾಧಿಕಾರಿಗೆ ನೀಡಿರುತ್ತೇನೆ. ಈಗ ಆ ವರದಿ ನೋಡುತ್ತಿದ್ದು ಆ ವರದಿಯನ್ನು ನಿ.ಪಿ 3 ಎಂದು ಗುರುತಿಸಲಾಯಿತು.

ಸ್ಪೇಷಲ್ ಕೇಸ್ - 40/2020
ಚಾಸಾ-01, ಫ್ರಾಸಾ-01

ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಹಿಯನ್ನು ನಿ.ಪಿ 3 (ಎ) ಎಂದು ಗುರುತಿಸಲಾಗಿದೆ. ಈಗ ನಾನು ಆ ರೀತಿ ವಶಪಡಿಸಿಕೊಂಡ ಸ್ಯಾಂಪಲ್ ಗಾಂಜಾ ಗಿಡ ನೋಡುತ್ತಿದ್ದು (ಅದನ್ನು ಸೀಲು ಒಡೆದು ಸಾಕ್ಷಿಗೆ ತೋರಿಸಲಾಗಿದೆ) ಸಾಕ್ಷಿ ಅದನ್ನು ಗುರುತಿಸಿರುವುದರಿಂದ ಸ್ಯಾಂಪಲ್ ಗಾಂಜಾವನ್ನು ಮುದ್ದೇಮಾಲುಃ- 1 ಎಂದು ಗುರುತಿಸಲಾಯಿತು. ಮುದ್ದೇಮಾಲುಃ- 1 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ತನ್ನ ಸಹಿ ಇರುವುದಾಗಿ ಸಾಕ್ಷಿ ಅದನ್ನು ಗುರುತಿಸಿರುತ್ತಾರೆ. ಆ ಸಮಯದಲ್ಲಿ ಪೋಟೋಗಳನ್ನು ತೆಗೆದಿದ್ದು ಈಗ ನೋಡುತ್ತಿರುವ ಪೋಟೋಗಳಳು ಅದೇ ಪೋಟೊಗಳಾಗಿದ್ದು, ಸಾಕ್ಷಿ ಗುರುತಿಸಿದ ಆ ಪೊಟೋಗಳನ್ನು ನಿ.ಪಿ 4 ರಿಂದ 7 ಎಂದು ಕ್ರಮವಾಗಿ ಗುರುತಿಸಲಾಯಿತು. ಸಾಕ್ಷಿ ಆ ಮಹಜರು ಕೂಡ ಗುರುತಿಸಿದ್ದು ಅದನ್ನು ನಿ.ಪಿ 8 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ 8 (ಎ) ಎಂದು ಗುರುತಿಸಲಾಯಿತು. ಆ ದಿನ ವಶಕ್ಕೆ ತೆಗೆದುಕೊಂಡ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಾವು ಠಾಣೆಗೆ ಬಂದು ಠಾಣಾಧಿಕಾರಿಯ ಮುಂದೆ ಮಹಜರು, ನೋಟಿಸುಗಳು, ವಶಪಡಿಸಿಕೊಂಡ ಸ್ಯಾಂಪಲ್‌ಗಳು ಮತ್ತು ಗಾಂಜಾ ಗಿಡಗಳು ಮತ್ತು ಆರೋಪಿಯನ್ನು ಠಾಣಾಧಿಕಾರಿಗಳ ಮುಂದೆ ಹಾಜರು ಮಾಡಿರುತ್ತೇನೆ.

**ಪಾಟೀ ಸವಾಲು – ಶ್ರೀ ಜಿ ಎಸ್ ಕೆ ವಕೀಲರಿಂದ – ಆರೋಪಿ ಪರವಾಗಿ**

ನಾನು ನನಗೆ ಮಾಹಿತಿ ಬಂದ ಕೂಡಲೇ ಮೇಲಾಧಿಕಾರಿಗಳಿಗೆ ಮಾಹಿತಿ ಕೊಟ್ಟಿದ್ದೇನೆ. ಆ ಬಗ್ಗೆ ನಾನು ನನ್ನ ವರದಿಯಲ್ಲಾಗಲಿ ಮಹಜರಲ್ಲಿ ಆಗಲಿ ನಮೂದು ಮಾಡಿಲ್ಲ. ನಾನು ಪೋನು ಮೂಲಕ ಮೇಲಾಧಿಕಾರಿಗಳಿಗೆ ನನಗೆ ಮಾಹಿತಿ ಬಂದ ಮೇಲೆ ಅವರಿಗೆ ಮಾಹಿತಿ ಕೊಟ್ಟೆ. ಈ ಮಾಹಿತಿ ಕೊಟ್ಟ ಬಗ್ಗೆ ನಾನು ಯಾವ ದಾಖಲೆಯಲ್ಲೂ ನಮೂದು ಮಾಡಿಲ್ಲ. ನಾನು ಸ್ಥಳಕ್ಕೆ ಹೋದಾಗ ಮಧ್ಯಾಹ್ನ 02.15 ನಿಮಿಷ ಆಗಿತ್ತು. ನನ್ನ ಕಛೇರಿಯಿಂದ ಸತ್ತೇಗಾಲಕ್ಕೆ ಸುಮಾರು 20 ಕಿಲೋ ಮೀಟರು ಆಗುತ್ತದೆ.

ತಿಲ್ಲೆಗೌಡನ ದೊಡ್ಡಿಯಲ್ಲಿ ಯಾರ ಯಾರ ಹೆಸರಿನಲ್ಲಿ ಯಾವ ಯಾವ ಸರ್ವೆ ನಂಬರು ಜಮೀನು ಇದೆ ಎಂದು ನಾನು ತಿಳಿದುಕೊಂಡಿಲ್ಲ. ಜಮೀನುಗಳ ವಿಸ್ತೀರ್ಣ ನಾನು ತಿಳಿದುಕೊಂಡಿಲ್ಲ. ನನ್ನ ಮಹಜರಲ್ಲಿ ಆಗಲಿ ಅಥವಾ ವರದಿಯಲ್ಲಿ ಆಗಲಿ ಜಮೀನಿನ ವಿಸ್ತೀರ್ಣ ಅಥವಾ ಸರ್ವೆ ನಂಬರು ನಮುದು ಮಾಡಿಲ್ಲ. ನಾನು ಆ ಜಮೀನಿಗೆ ಹೋದಾಗ ಅದನ್ನು ಸರ್ವೆ ಮಾಡಿ ಹದ್ದು ಬಸ್ತು ನಿಗದಿಪಡಿಸಿಲ್ಲ. ಸರ್ವೆ ಅಧಿಕಾರಿಗಳು ಆ ಜಮೀನಿಗೆ ಸಂಬಂಧಪಟ್ಟ ಹಾಗೇ ಯಾವುದೇ ದಾಖಲೆ ತೆಗೆದುಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಸರ್ವೆ ಅಧಿಕಾರಿಗಳಿಂದ ಯಾವುದೇ ದಾಖಲೆ ಪಡೆದುಕೊಂಡಿಲ್ಲ. ನನ್ನ ಜೊತೆ ರೆವಿನ್ಯೂ ಅಧಿಕಾರಿಗಳನ್ನು ಕರೆದುಕೊಂಡು ಹೋಗಲು ನನಗೆ ತೊಂದರೆ ಇರಲಿಲ್ಲ. ನಿ.ಪಿ **2** ಮೊದಲೇ ಟೈಪು ಮಾಡಿದ ಪಾರಮೆಟ್ ರೆಡಿ ಇರುತ್ತದೆ ಅದರಲ್ಲಿ ಅಡ್ರೆಸ್ ಗಳನ್ನು ಮಾತ್ರ ನಮೂದು ಮಾಡಿಕೊಳ್ಳುತ್ತೆವೆ. ನೋಟೀಸ್ ನೋಡಿ ಪಂಚರಿಗೆ ಎಷ್ಟು ಗಂಟೆಗೆ ಆ ನೋಟೀಸುಗಳನ್ನು ಕೊಟ್ಟೆ ಎಂದು ಹೇಳಲು ಆಗುವುದಿಲ್ಲ. ಅದರಲ್ಲಿ ಟೈಮು ನಮೂದು ಮಾಡಿಲ್ಲ.

ಸುಬ್ರಮಣಿ ಎನ್ನುವವರಿಗೆ ಕನ್ನಡ ಓದಲು ಬರೆಯಲು ಬರುತ್ತದೋ ಇಲ್ಲವೋ ನಾನು ತಿಳಿದುಕೊಂಡಿಲ್ಲ. ಆರೋಪಿ ಇಲ್ಲಿ ಇದ್ದ ಎನ್ನುವದಕ್ಕೆ ಮಹಜರಲ್ಲಿ ಆರೋಪಿಯ ಸಹಿ ತೆಗೆದುಕೊಂಡಿದ್ದೇನೆ ಎಂದು ಸಾಕ್ಷಿ ಹೇಳಿ ಮಹಜರಲ್ಲಿರುವ ಆರೋಪಿಯ ಸಹಿ ತೋರಿಸಿರುತ್ತಾರೆ. ಸಾಕ್ಷಿ ತೋರಿಸಿದ ಆ ಸಹಿಯನ್ನು ನಿ.ಪಿ **8** (ಬಿ) ಎಂದು ಗುರುತಿಸಲಾಗಿದೆ. ನನ್ನ ಜೊತೆಗೆ ಯಾವುದೇ ಪತ್ರಾಂಕಿತ ಅಧಿಕಾರಿಯನ್ನು ಕರೆದುಕೊಂಡು ಹೋಗಿಲ್ಲ. ದೊರೆಸ್ವಾಮಿ ಮತ್ತು ಷಣ್ಮುಗ, ಕಣ್ಣಪ್ಪ ಇವರುಗಳಿಗೆ ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದು ನನಗೆ ಹೇಳಲು ಆಗುವುದಿಲ್ಲ. ಆರೋಪಿ ಅಲ್ಲಿ ವ್ಯವಸಾಯ ಮಾಡುತ್ತಿದ್ದ ಎನ್ನುವದಕ್ಕೆ ಯಾವ ದಾಖಲೆಯನ್ನು ಅಲ್ಲಿ ನೋಡಿಲ್ಲ. ಆ ಪೊಟೋಗಳನ್ನು ತೆಗೆದ ಬಗ್ಗೆ ಮಹಜರನಲ್ಲಿ ನಮೂದು ಮಾಡಿಲ್ಲ. ಆ ಪೊಟೋಗಳಲ್ಲಿ ಆರೋಪಿಯಾಗಲಿ ಅಥವಾ ಪಂಚರ ಭಾವಚಿತ್ರಗಳ ಕಾಣಿಸುತ್ತಿಲ್ಲ. ಆ ಪೊಟೋಗಳಲ್ಲಿ ನನ್ನ ಭಾವಚಿತ್ರ ಕೂಡ ಇಲ್ಲ.

ಸ್ಪೇಷಲ್ ಕೇಸ್ - 40/2020
ಚಾಸಾ-01, ಫ್ರಾಸಾ-01

ಆ ಪೊಟೊಗಳಲ್ಲಿ ಯಾವ ದಿನ ಪೊಟೋ ತೆಗೆದಿದ್ದಾರೆ, ಮತ್ತು ಯಾವ ಸಮಯದಲ್ಲಿ ತೆಗೆದಿದ್ದಾರೆ ಎಂದು ನಮೂದು ಆಗಿಲ್ಲ. ಮಹಜರಲ್ಲಿ ಯಾರು ಎಷ್ಟು ಗಂಟೆಗೆ ತೆಗೆದರು ಎಂದು ನಮೂದು ಇಲ್ಲ. ಆ ಪೊಟೋಗಳನ್ನು ಕೇಸ್ ಗಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಯಾವ ಕಡೆ ಓಡಿಹೋಗುತ್ತಿದ್ದ, ಯಾರು ಹಿಡಿದರು ಎಂದು ಮಹಜರಲ್ಲಿ ನಮೂದು ಮಾಡಿಲ್ಲ.

ಆರೋಪಿ ಸ್ಥಳದಲ್ಲಿ ಇದ್ದ ಮತ್ತು ಮಹಜರಗೆ ಸಹಿ ಮಾಡಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮಹಜರುಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಆರೋಪಿ ಸ್ಥಳದಲ್ಲಿ ಇರಲೇ ಇಲ್ಲ ಮತ್ತು ಯಾವುದೇ ಕೃತ್ಯವನ್ನು ಎಸಗಿಲ್ಲ ಎಂದರೆ ಸರಿಯಲ್ಲ. ಆ ಜಮೀನಿಗೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಆರೋಪಿ ಸಹಿಯನ್ನು ಕೇಸ್ ಗಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ರಾತ್ಲು ತೂಕ ಮಾಪಕವನ್ನು ಯಾರು ಎಷ್ಟು ಗಂಟೆಗೆ ತರಿಸಿದರು ಎಂದು ಮಹಜರಲ್ಲಿ ನಮೂದು ಮಾಡಿಲ್ಲ. ತೂಕ ಮಾಪಕವನ್ನು ಅವರು ತಂದು ಕೊಟ್ಟರು ಎನ್ನುವದಕ್ಕೆ ಮಹಜರಲ್ಲಿ ಸಹಿ ಪಡೆದುಕೊಂಡಿಲ್ಲ. ಯಾವ ಸಿಬ್ಬಂದಿ ವರ್ಗದವರು ಏನೇನು ಕರ್ತವ್ಯ ನಿರ್ವಹಿಸಿದರು ಎಂದು ಮಹಜರಲ್ಲಿ ನಮೂದು ಮಾಡಿಲ್ಲ. ದಿಃ08.12.2017 ರಂದು ತಿಲ್ಲೆ ಗೌಡನ ದೊಡ್ಡಿ ಗ್ರಾಮಕ್ಕೆ ಹೋಗಿ ಅಲ್ಲಿ ದಾಳಿ ಮಾಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಂಚರಿಗೆ ನೋಟೀಸು ಕೊಟ್ಟಿದ್ದೆ ಅವರು ಸ್ಥಳದಲ್ಲಿ ಬಂದು ಸಹಿ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನಿನಲ್ಲಿ ಗಾಂಜಾ ಗಿಡ ಬೆಳೆದಿದ್ದರು ಅದನ್ನು ಕೀಳಿಸಿ ಎಣಿಸಿ ತೂಕ ಮಾಡಿಸಿದೆ ಮತ್ತು ಅದರಲ್ಲಿ ಸ್ಯಾಂಪಲ್ ಗಿಡವನ್ನು ಅಂದರೆ 500 ಗ್ರಾಂ ತೂಕದ ಗಿಡವನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲು ಮಾಡಿ ವಶಪಡಿಸಿಕೊಂಡು ಅದರ ಮೇಲೆ ಅಂಟಿಸಿರುವ ಬಿಳಿ ಚೀಟಿಯ ಮೇಲೆ ಸಹಿ ಕೂಡ ಮಾಡಿದೆ, ಆ ನಂತರ ಅವುಗಳನ್ನು ಮತ್ತು ಆರೋಪಿಯನ್ನು ಮತ್ತು ಆ

ನೋಟೀಸುಗಳನ್ನು ಠಾಣಾಧಿಕಾರಿಗಳ ಮುಂದೆ ಹಾಜರು ಮಾಡಿದೆ ಮತ್ತು ವರದಿಯನ್ನು ಅವರಿಗೆ ನೀಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸ್ಥಳಕ್ಕೆ ಹೋಗುವ ಮುಂಚೆ ಅಂಗ ಶೋಧನೆ ಮಾಡಿಕೊಂಡಿದ್ದೇವೆ. ನಮ್ಮ ಬಳಿ ಏನು ವಸ್ತುಗಳು ಇತ್ತು ಎಂದು ಪಟ್ಟಿ ಮಾಡಿಲ್ಲ. ಶೋಧನೆ ಮಾಡಿದ್ದನ್ನು ಮಹಜರಲ್ಲಿ ನಮೂದು ಮಾಡಿಲ್ಲ. ಸ್ಯಾಂಪಲ್ ಸೀಲು ಮೊಹರನ್ನು ಯಾರಿಗೆ ಕೊಟ್ಟೆ ಎಂದು ಹೇಳಲು ನನಗೆ ನೆನಪಿಲ್ಲ. ನಾನು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದ ಬಗ್ಗೆ ನಮ್ಮ ಠಾಣಾ ದಿನಚರಿಯಲ್ಲಿ ನಮೂದು ಇರುತ್ತದೆ. ಈ ಬಗ್ಗೆ ದಾಖಲೆಯನ್ನು ನಾನು ಠಾಣಾಧಿಕಾರಿಗಳಿಗೆ ಕೊಟ್ಟಿಲ್ಲ.

ಠಾಣೆಗೆ ಹೋಗಿ ವರದಿ ಕೊಟ್ಟ ಬಗ್ಗೆ ಎಫ್ ಐ ಆರ್ ನ ಕಾಲಂ **12** ರಲ್ಲಿ ನನ್ನ ಸಹಿ ಪಡೆದಿಲ್ಲ. ನಾನು ಠಾಣೆ ಗೆ ಹೋದೆ ವರದಿಯನ್ನು ಕೊಟ್ಟೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟ ವರದಿಯನ್ನು ಯಾರು ಟೈಪು ಮಾಡಿದರು ಎಂದು ನಾನು ನಮೂದಿಸಿಲ್ಲ. ನನಗೆ ಮಾಹಿತಿ ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿ ಯಾವುದೇ ಮಹಜರು ಮಾಡಿಲ್ಲ , ಠಾಣೆಯಲ್ಲಿ ಮಹಜರನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ನಾನು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೇಮಾಲುಃ- **1** ಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುದ್ದೇಮಾಲುಃ- **1** ಚೀಟಿಯ ಮೇಲೆ ಸೀಲನ್ನು ಠಾಣೆಯಲ್ಲಿ ಮಾಡಿದ್ದು ಎಂದರೆ ಸರಿಯಲ್ಲ.

ಸದರಿ ಚೀಟಿಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿ ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸ್ಪೇಷಲ್ ಕೇಸ್ - 40/2020
ಚಾಸಾ-01, ಪ್ರಾಸಾ-01

ನಮ್ಮಲ್ಲಿ ಸ್ಥಳಕ್ಕೆ ಹೋದಾಗ ನಮ್ಮಲ್ಲಿ ಯಾವ ವಸ್ತುಗಳು ಇತ್ತು ಎಂದು ನಮೂದು ಮಾಡಿಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಬಿ. ಎಸ್. ಭಾರತಿ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಹಾಗು ವಿಶೇಷ ನ್ಯಾಯಾಧೀಶರು,**
**ಚಾಮರಾಜನಗರ.**